‘ನಿಮಿಗೆ ಹೇಳಿ ಹೇಳಿ ಸಾಕಾಯ್ತು. ಆ ದರಿದ್ರ ಕರಿಬೆಕ್ಕನ್ನು ಮನೆಯ ಒಳಗೆ ಸೇರಿಸ್ಬೇಡಿ ಅಂತ. ಅದು ಒಳಗೆ ಬಂದದ್ರಿಂದಲೇ ನಿಮಿಗೆ ಹೀಗೆ ಆದದ್ದು. ಅದು ಬಂದು ಒಂದೂವರೆ ತಿಂಗಳಲ್ಲಿ ಏಂತದೆಲ್ಲ ಆಯ್ತು ಮನೆಯಲ್ಲಿ? ದಿಶಾ ಫೈಲಾದ್ಲು. ನಿಮಿಗೆ ಹಾರ್ಟ್ ಅಟ್ಯಾಕ್ ಆಗಿ ಲಕ್ಷಗಟ್ಲೆ ಖರ್ಚಾಯ್ತು. ಎಲ್ಲ ಆ ದರಿದ್ರ ಬೆಕ್ಕಿನಿಂದ್ಲೇ ಆದದ್ದು.’

‘ಸ್ಮಿತಾ ಪ್ಲೀಸ್ ಮಾತು ಮಾತಿಗೂ ದರಿದ್ರ ಬೆಕ್ಕು ಅಂತ ಮಾತ್ರ ಹೇಳ್ಬೇಡ. ಇಷ್ಟಕ್ಕೂ ಅದು ನಿಂಗೆ ಎಂತ ಮಾಡಿದೆ? ಮನುಷ್ಯ ಅಂದ್ರೆ ಕಾಯಿಲೆ ಕಸಾಲೆ ಬರದೇ ಇರ್ತದಾ? ಹಾಗೆ ನಂಗೆ ಸಾ ಬಂದಿದೆ. ಎಲ್ಲದಕ್ಕೂ ನೀನು ಆ ಬೆಕ್ಕಿನ ಮೇಲೆ ಎಂತಕ್ಕೆ ಆಪಾದನೆ ಹಾಕ್ತಿ?’



